ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕೂಡ್ಲಿಗಿ.

ಸಿ.ಸಿ. ನಂ. 186/2016

| | | | |
|---|---|---|---|
| ಸಾಕ್ಷಿದಾರರ ಹೆಸರುಃ | ಸೈಯದ್ ಹಜರತ್ ಶಾಹ | ಚಾಸಾಃ | 01 |
| ತಂದೆಯ ಹೆಸರುಃ | ಸೈಯದ್ ಮೆಹಬೂಬ್ ಪೀರ್ | ಪ್ರಾಸಾಃ | 01 |
| ವಯಸ್ಸುಃ | 70 ವರ್ಷ | ಸತ್ಯ ಪ್ರತಿಜ್ಞೆಯ ದಿನಾಂಕಃ **05.03.2024** | |
| ಉದ್ಯೋಗಃ | ನಿವೃತ್ತ ಸಹಾಯಕ ನಿರ್ದೇಶಕರು | | |
| ವಾಸಸ್ಥಳಃ | ಹೊಸಪೇಟೆ | | |

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ.

ದಿಃ 11.01.2012 ರಿಂದ ಡಿಸೆಂಬರ್-2013 ಮುಗಿಯುವರೆಗೆ ತಾಲೂಕು ಕಚೇರಿ ಕೂಡ್ಲಿಗಿಯಲ್ಲಿ ಸಹಾಯಕ ನಿರ್ದೇಶಕರಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2010-11 ನೇ ಸಾಲಿನ ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ 12 ಗ್ರಾಮದ ಕಾಮಗಾರಿಗಳು ಸರಿಯಾಗಿ ನಡೆದಿಲ್ಲ ಎಂದು ದೂರು ಬಂದಿರುತ್ತದೆ. ದಿಃ 14.03.2013 ರಂದು ಹೊಸಳ್ಳಿ ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿರುತ್ತೇನೆ. ಚಾಸಾ 2 ರವರು ಆ ಸಮಯದಲ್ಲಿ ಜಿಲ್ಲಾ ಪಂಚಾಯತಿ ಮುಖ್ಯಯೋಜನಾಧಿಕಾರಿ, ಬಳ್ಳಾರಿ ಹಾಗೂ ನೋಡಲ್ ಅಧಿಕಾರಿಯಾಗಿದ್ದು, ಚಾಸಾ 2 ರವರು ದಿಃ12.12.2012 ರಂದು ಕಾಮಗಾರಿಯನ್ನು ಪರಿಶೀಲನೆ ಮಾಡಿ, ಆ ಬಗ್ಗೆ ದೂರು ನೀಡಲು ನನಗೆ ತಿಳಿಸಿರುತ್ತಾರೆ. ನನಗೆ ದಿಃ 22.01.2013 ವರದಿ ನೀಡಿರುತ್ತಾರೆ. ಸದರಿ ವರದಿಯ ಆಧಾರದ ಮೇರೆಗೆ ನಾನು ಒಂದು ವರದಿಯನ್ನು ತಯಾರು ಮಾಡಿ ದೂರನ್ನು ನೀಡಿರುತ್ತೇನೆ. ಆ ಕಾಮಗಾರಿ 2009 ನೇ ಇಸವಿಗೆ ಸಂಬಂಧಪಟ್ಟಿರುತ್ತದೆ. ಸದರಿ ಕಾಮಗಾರಿ ಅರಣ್ಯೀಕರಣ ಕಾಮಗಾರಿಯಾಗಿರುತ್ತದೆ.

ಚಾಸಾ 2 ರವರು ನೀಡಿದ ತನಿಖಾ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 1 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಾನು ತಯಾರು ಮಾಡಿ ತನಿಖಾ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 2 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಾನು ನೀಡಿದ ದೂರನ್ನು ಈಗ ನೋಡುತ್ತಿದ್ದು ಅದನ್ನು ನಿಪಿ 3 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 3 ಎ ಎಂದು ಗುರುತಿಸಲಾಯಿತು. ಅರಣ್ಯೀಕರಣ ಕಾಮಗಾರಿಯ 2 ಅಂದಾಜು ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 4 ಎಂದು ಅದರಲ್ಲಿರುವ ನನ್ನ ಸಹಿಯನ್ನು ನಿಪಿ 4 ಎ ಎಂದು ಗುರುತಿಸಲಾಯಿತು. ಅದಕ್ಕೆ ಸಂಬಂಧಪಟ್ಟ ಬಿಲ್ಲನ್ನು ಹಾಜರುಪಡಿಸಿದ್ದು ಅದನ್ನು ನಿಪಿ 5 ಎಂದು ಅದರಲ್ಲಿರುವ ಸಹಿಯನ್ನು ನಿಪಿ 5 ಎ ಎಂದು

ಗುರುತಿಸಲಾಯಿತು. ಅರಣ್ಯೀಕರಣ ಕಾಮಗಾರಿಯ ಕೂಲಿಕಾರರ ಪಟ್ಟಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ 6 ಎಂದು ಅದರಲ್ಲಿರುವ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು.

ಮುಖ್ಯ ವಿಚಾರಣೆ ಮುಕ್ತಾಯ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಎನ್ ಕೆ ಎಸ್ ವಕೀಲರಿಂದಃ</u>

ಚಾಸಾ 2-6 ರವರ ಪರಿಚಯ ಇದೆ ಎಂದರೆ ನನಗೆ ಚಾಸಾ 2 ರವರು ಮಾತ್ರ ಗೊತ್ತು. ಚಾಸಾ 2 ರವರು 12 ಕಾಮಗಾರಿಗಳ ಪರಿಶೀಲನೆ ಮಾಡಿರುತ್ತಾರೆ. ಅವರು ಈ ಬಗ್ಗೆ ದೂರನ್ನು ನೀಡಲು ನನಗೆ ಹೇಳಿದ್ದು ನಾನು ಆ ಬಗ್ಗೆ ದೂರನ್ನು ನೀಡಿರುತ್ತೇನೆ. 12 ಕಾಮಗಾರಿಗಳ ರೂಪರೇಷೆ ಹಾಗೂ ಹಣ ಮಂಜೂರಾದ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿ. ರಸ್ತೆ ಹಾಗೂ ಅರಣ್ಯೀಕರಣ ಕಾಮಗಾರಿಗಳು 2009-10 ಸಾಲಿಗೆ ಸಂಬಂಧಪಟ್ಟಿರುತ್ತವೆ. ಗೋಕಟ್ಟೆ ಕಾಮಗಾರಿ 2010 ರ ಕಾಮಗಾರಿಯಾಗಿದೆ. ಮೇಲೆ ಹೇಳಿದ 2 ಕಾಮಗಾರಿಗಳು ಯಾವ ಕಾಮಗಾರಿಯಡಿಯಲ್ಲಿ ಹಣ ಬಿಡುಗಡೆಯಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ನಾನು ಸ್ಥಳ ಪರಿಶೀಲನೆ ಮಾಡಿರುವುದಿಲ್ಲ. ಚಾಸಾ 2 ರವರು ಮಾಡಿರುತ್ತಾರೆ. ಚಾಸಾ 2 ರವರ ಅಡಿಯಲ್ಲಿ ನಾನು ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಕಚೇರಿಯ ಕೆಲಸಕ್ಕೆ ಸಂಬಂಧಪಟ್ಟಂತೆ ಚಾಸಾ 2 ರವರು ಸಂಪರ್ಕಿಸುತ್ತೇವೆ ಎಂದರೆ ಸರಿ. ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ಇಲ್ಲ ಎಂದರೆ ಸರಿ. ಯಾವುದೇ ಅವ್ಯವಹಾರ ಆಗಿರುವುದಿಲ್ಲ, ಎಲ್ಲ ಕಾಮಗಾರಿ ಸರಿಯಾಗಿ ನಡೆದಿರುತ್ತದೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.